# ಯೇಸುಸ್ವಾಮಿಯ ಮರಣ ಒಂದು ವೈಜ್ಞಾನಿಕ ವಿಶ್ಲೇಷಣೆ



ಸಂಗ್ರಹ : ಸುನಯನ ವಾಲ್ಟರ್ಸ್

ತನ್ನ 33ನೇ ವಯಸ್ಸಿನಲ್ಲಿ ಯೇಸುಸ್ವಾಮಿಯು ಮರಣ ಶಿಕ್ಷೆಗೆ ಒಳಗಾದನು.

ಆ ಕಾಲದಲ್ಲಿ ಕ್ರೂಜೆಯ ಮರಣವು ಅತ್ಯಂತ ಕೆಟ್ಟ ಶಿಕ್ಷೆಯಾಗಿತ್ತು. ನಿಕೃಷ್ಟರಾದ ಪಾತಕಿಗಳು ಮಾತ್ರ ಆ ದಂಡನೆಗೆ ಒಳಗಾಗುತ್ತಿದ್ದರು. ಯೇಸುವಿಗಾದ ಶಿಕ್ಷೆಯು ಇನ್ನೂ ಘೋರವಾಗಿತ್ತು. ಏಕೆಂದರೆ, ಕೈಕಾಲುಗಳನ್ನು ಕಟ್ಟುವುದಕ್ಕಿಂತ ವಿಭಿನ್ನವಾಗಿ ಯೇಸುಸ್ವಾಮಿಯ ಕೈಕಾಲುಗಳನ್ನು ಮೊಳೆಗಳಿಂದ ಕ್ರೂಜೆಗೆ ಬಡಿದರು.



ಪ್ರತಿಯೊಂದು ಮೊಳೆಯೂ 6ರಿಂದ 8 ಇಂಚಿನಷ್ಟು ಉದ್ದವಿತ್ತು. ಮೊಳೆಗಳು ಆತನ ಮಣಿಕಟ್ಟನ್ನು ಭೇದಿಸಿದವು. ಸಾಮಾನ್ಯವಾಗಿ ಕಂಡಂತೆ ಆತನ ಅಂಗೈಗಳನ್ನಲ್ಲ. ಮಣಿಕಟ್ಟಿನಲ್ಲಿ ಭುಜದವರೆಗೂ ಹಬ್ಬಿರುವ ಒಂದು ಸ್ನಾಯು ಇದ್ದು, ಮೊಳೆ ಬಡಿಯುವಾಗ ಆ ಸ್ನಾಯುವು ಹರಿಯಲ್ಪಟ್ಟು ಆಗ ಯೇಸುವು ತನ್ನ ಉಸಿರಾಟಕ್ಕಾಗಿ ಕೈಗಳನ್ನು ಆಧಾರವಮಾಡಲಾಗದೆ, ಬೆನ್ನಿನ ಮೂಲಕ ಆಧರಿಸಬೇಕೆಂಬುದಾಗಿ ರೋಮಾಯ ಸೈನಿಕರಿಗೆ ತಿಳಿದಿತ್ತು.




ಆತನ ಎರಡೂ ಕಾಲುಗಳನ್ನು ಜೋಡಿಸಿ ಮೊಳೆಹೊಡೆದರು. ಯೇಸುವು ಈ ಮೊಳೆಬಡಿದ ಕಾಲಿನ ನೋವಿನಿಂದಾಗಿ, ಕಾಲಿನ ಮೂಲಕ ಆಧಾರ ಪಡೆಯಲು ಅಸಾಧ್ಯವಾಗಿ, ತನ್ನ ಬೆನ್ನನ್ನು ತುಸು ಬಾಗಿಸಿ ಉಸಿರಾಡಬೇಕಾಗುತ್ತಿತ್ತು. ಆ ಹೋರಾಟ, ನೋವು, ಸಂಕಟ ಮತ್ತು ಧೈರ್ಯಗಳನ್ನು ಊಹಿಸಬಲ್ಲಿರಾ?

ಈ ರೀತಿ ಯೇಸುಸ್ವಾಮಿಯ 3 ತಾಸುಗಳಿಗಿಂತಲೂ ಹೆಚ್ಚು ಕಾಲ ಜೀವಿತ ಸ್ಥಿತಿಯಲ್ಲಿದ್ದನು. ಹೌದು, 3 ತಾಸುಗಳು! ಮರಣ ಹೊಂದುವ ಕೆಲವು ನಿಮಿಷಗಳ ಮೊದಲು ಆತನ ದೇಹದಿಂದ ರಕ್ತ ಒಸರುವುದು ನಿಂತು ಹೋಗಿ, ಬರೇ ನೀರು ಹರಿಯಿತು.



ಚಿತ್ರಗಳಲ್ಲಿ ಆತನ ಕೈಕಾಲುಗಳ ಗಾಯದ ಹೊರತಾಗಿ, ಪಕ್ಕೆಯಲ್ಲಿರುವ ಗಾಯವನ್ನೂ ನೋಡುತ್ತೇವೆ. ಆನಿಗೆ ಮೊಳೆ ಬಡಿಯುವುದಕ್ಕೆ ಮೊದಲೇ ಯೇಸುವಿಗೆ ಹೊಡೆದರು, ಚಾಟಿ ಏಟು ಕೂಡಾ ಹೊಡೆಯಲಾಯಿತು. ದೇಹದ ಮಾಂಸ ಕಿತ್ತು ಬರುವ ಹಾಗೆ ಏಟು ಹೊಡೆದರು. ಮುಳ್ಳು ಕಿರೀಟದಲ್ಲಿ 2–3 ಇಂಚು ಉದ್ದದ ಮುಳ್ಳುಗಳಿದ್ದವು. ಅದರ ಮೇಲೆ ಏಟು ಬಿದ್ದಾಗ ತಲೆಯ ಮೇಲೆ ಆಳವಾದ ಗಾಯಗಳುಂಟಾದುವು. ರೋಮಾಯನೊಬ್ಬನು ಭರ್ಜಿಯಿಂದ ಕೊನೆಗೆ ಆತನ ಪಕ್ಕೆಗೆ ತಿವಿದನು. ಸಾಮಾನ್ಯ ಮನುಷ್ಯನಿಗೆ ಈ ಹಿಂಸೆ ತಡೆಯಲಸಾಧ್ಯ.

ಕೊನೆಗೆ ಹರಿಯಲು ಆತನ ದೇಹದಲ್ಲಿ ರಕ್ತವೇ ಇರಲಿಲ್ಲ. ಗಾಯಗಳಿಂದ ನೀರು ಮಾತ್ರ ಹರಿಯಿತು. ಪ್ರೌಢ ಮನುಷ್ಯನ ದೇಹದಲ್ಲಿ ಸಾಮಾನ್ಯವಾಗಿ $3^1/_2$ ಲೀಟರ್ ರಕ್ತವಿರುತ್ತದೆ.



ಯೇಸುಸ್ವಾಮಿಯು ಅಷ್ಟೂ ರಕ್ತವನ್ನು ನಮಗಾಗಿ ಚೆಲ್ಲಿದನು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಆತನು ಎಂತಹ ದೀನಸ್ಥಿತಿಗೆ ಒಳಗಾದನೆಂದರೆ ತನ್ನದೇ ಕ್ರೂಜೆಯನ್ನು 2 ಕಿಲೋಮೀಟರಿನಷ್ಟು ದೂರ ಹೊತ್ತುಕೊಂಡು ಆತನು ಹೋಗುವಾಗ ಗುಂಪಿನಲ್ಲಿದ್ದ ಜನರು ಆತನ ಮುಖಕ್ಕೆ ಉಗುಳಿದರು, ಕಲ್ಲಿನಿಂದ ಹೊಡೆದರು. ಕ್ರೂಜೆಯ ತೂಕವು 30 ಕೆ.ಜಿ. ಯಷ್ಟಿರುತ್ತಿತ್ತು.


ನಮಗೆ ದೇವರ ಬಳಿ ಹೋಗುವ ಮಾರ್ಗವನ್ನು ನಿರ್ಮಿಸುವುದಕ್ಕಾಗಿ, ಯೇಸುಸ್ವಾಮಿಯು ಇದನ್ನೆಲ್ಲಾ ಸಹಿಸಬೇಕಾಯಿತು. ನೆನಪಿಡಿರಿ! ನಮ್ಮ ಪಾಪವನ್ನು ತೊಳೆಯುವುದಕ್ಕಾಗಿ! ನನಗಾಗಿ! ನಿನಗಾಗಿ! ಮತ್ತು ನಮ್ಮ ರಕ್ಷಣೆಯ ಒಂದೇ ಮಾರ್ಗವು ಆತನಾಗಿದ್ದಾನೆ. ■

**ಗಮನಿಸಿ**

- "ತುತ್ತುಗಳು" ನಿಮಗೆ ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ತಲುಪುತ್ತಿದೆಯೇ? ಇಲ್ಲವಾದಲ್ಲಿ ನಮಗೆ ತಿಳಿಸಿ.
- ದಯಮಾಡಿ ಇದುವರೆಗೆ ಚಂದಾ ನವೀಕರಿಸದ ಚಂದಾದಾರರು ಕೂಡಲೇ ನವೀಕರಿಸಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

• ಸಂಪಾದಕ

**BITHDAY WISHES**





Stephen Gershom
Hubli
11-04-1991